ಕೆಡವಿ ಜಾಗವನ್ನು ಮಾರುವುದು ಅವನಿಗೆ ಆಕರ್ಷಕವೆನಿಸಿತ್ತು. ಪುರಾತನ ವಸ್ತುಗಳನ್ನು ವಿದೇಶದಲ್ಲಿ ಹರಾಜು ಹಾಕುವುದರಲ್ಲಿಯೂ ಅವನಿಗೆ ದೊಡ್ಡ ಲಾಭದ ಪಾಲಿರುತ್ತಿತ್ತು. ಎಂತೆಂತಾ ಮಹಮಹಾ ಸಾಮ್ರಾಜ್ಯಗಳ ಅಮೂಲ್ಯ ವಸ್ತುಗಳೇ ಈಗ ಉಳಿದಿಲ್ಲ. ಯಾರಾದ್ರು ಅವನ್ನು ನೆನಪಿಸಿಕೊಂಡು ಕೊರಗತಿದಾರ? ಅಂದ ಮೇಲೆ ಅಂತಹ ಮಹತ್ವವಿಲ್ಲದ, ಒಂದು ವಂಶದ ಹೆಸರಲ್ಲಿರುವ, ಒಂದಷ್ಟು ಸಾಮಾನುಗಳಿಗೆ ಒದ್ದಾಡ್ತಾ ಯಾಕೆ ಕಷ್ಟಪಡಬೇಕು ಅಂತ ಕೇಳಿದ.

ದೇಶ್ವಂತರು ನಿರುತ್ತರರಾಗಿ ಕುಳಿತುಬಿಟ್ಟರು. ತಮ್ಮ ಮನೆತನದ ವಿಷಯದಲ್ಲಿ ಇಂತಹ ಕೆಳಮಟ್ಟದ ಅಸಡ್ಡೆಯ ಮಾತನ್ನು ಅವರು ಯಾರಿಂದಲೂ ಈತನಕ ಕೇಳಿರಲಿಲ್ಲ. ಈಗ ಸ್ವತಃ ತಮ್ಮ ಮಕ್ಕಳೆ ಆಡುತ್ತಿದ್ದಾರೆ. ಆವತ್ತು ಪಾಂಡುರಂಗ; ಇವತ್ತು ಮತ್ತೊಬ್ಬ. ಎಲ್ಲ ಅದೇ ಅಭಿಪ್ರಾಯ ಹೇಳುತ್ತಿದ್ದಾರೆ! ಇವರಿಬ್ಬರಿಗೂ ತಾನಿನ್ನೂ ಬದುಕಿದ್ದೇನೆ ಅಂತಾಗಲಿ, ತನಗೂ ಒಂದು ಅಭಿಪ್ರಾಯವಿದೆ ಅಂತಾಗಲಿ ಲೆಕ್ಕಕ್ಕೇ ಇಲ್ಲ. ಸಿಟ್ಟಿನ ಬದಲು ತೀವ್ರ ನೋವು ಆವರಿಸಿಕೊಂಡು, ಮಾತೇ ಬೇಡವೆನಿಸಿ ಅಲ್ಲಿಂದೆದ್ದು ಹೊರಟು ಹೋದರು. ಮರುದಿನ ಬೆಳಗ್ಗೆ ಶಾಂತಾರಾಮ ಹೊರಡುವ ಸಮಯದಲ್ಲೂ ದೇಶ್ವಂತರು ಕಾಣಿಸಿಕೊಳ್ಳಲೆ ಇಲ್ಲ. ಬಸ್ ನಿಲ್ದಾಣಕ್ಕೆ ಬಿಡಲು ಹೋದ ಆನಂದನಿಗೆ ಶಾಂತಾರಾಮ ಹೇಳಿದ: 'ಅಪ್ಪ ಹಳೇ ತಲೆಮಾರಿನವರು ಸರಿ, ಆದರೆ ಈ ಕಾಲದ ವಿದ್ಯಾವಂತ ನೀನು. ಪ್ರಾಯೋಗಿಕವಾಗಿ ಯೋಚಿಸಬಾರದೇನೋ? ಇವರಿಬ್ರಿಗೂ ವಯಸಾಯ್ತು. ಇವರ ನಂತರ, ಒಂಟಿಯಾಗಿ ಇಲ್ಲಿದ್ದುಕೊಂಡು ಏನು ಮಾಡತೀಯ? ಮದುವೆ ಯಾದ್ರು ಆ ಹುಡುಗಿ ಜೊತೇನೆ ಯಾಕೆ? ಸೀಮಂತಿನಿ ಕಡೆಯವ್ರ ಹತ್ತಿರ ಮಾತಾಡತೇನೆ ಬೇಕಿದ್ರೆ. ಕೆಲಸವಾದರೆ ಕೆಲಸ; ಬಿಸಿನೆಸ್ಸಾದರೆ ಬಿಸಿನೆಸ್ಸು. ಭರ್ಜರಿಯಾಗೆ ನೆಲೆ ನಿಲ್ಲುತೀಯ. ಈ ಪುರಾತನ ಭವನ ಅಂತೆಲ್ಲ ಆಚೆ ಬೇಡ. ಮಣ್ಣಿ ಕಟ್ಟಡ, ನೆರೆ ಹಾವಳೀನೊ ಭೂಕಂಪನೊ ಆಯ್ತು ಅಂದ್ರೆ ಬಿದ್ದೇಹೋಗತದೆ ನೋಡತಿರು!' ಆನಂದನಿಗೆ, ಇವರು ಬೇಗ ಬಸ್ಸು ಹತ್ತಲಿ ಅನಿಸತೊಡಗಿತು. ಬಸ್ಸು ಹೋದ ಮೇಲೆ ಮನೆಗೆ ಬಂದವ ಗದ್ದೆಗೆ ಹೊರಟುಹೋದ. ಮನಸು ಮೊದಲಿನಂತಾಗಲು ಏಕಾಂತ ಬೇಕಿತ್ತು.

ಎರಡು ದಿನವಾಗಿತ್ತು. ಬೆಳಗ್ಗೆ ಹತ್ತು ಗಂಟೆ ಹೊತ್ತಿಗೆ ಒಬ್ಬಾತ ಬಂದ. ಲೋಕೋಪಯೋಗಿ ಇಲಾಖೆಯ ಎಂಜಿನಿಯರು ಅಂತ ಪರಿಚಯ ಹೇಳಿದ. ಸ್ವಲ್ಪ ಹೊತ್ತು ಕುಶಲೋಪರಿ ಮಾತಾಡುತ್ತ ಕುಳಿತಿದ್ದಾತ ಎದ್ದು, ಏನೋ ಉಪಕರಣ ಹಿಡಿದುಕೊಂಡು ಗೋಡೆಯನ್ನು, ಅದರಡಿಯ ಮಣ್ಣನ್ನು ಪರೀಕ್ಷೆ ಮಾಡತೊಡಗಿದ.

ಇದೇನೆಂದು ಮನೆಯವರು ಆಶ್ಚರ್ಯ ಪಡುತ್ತಿದ್ದಂತೆ ಹತ್ತು ನಿಮಿಷ ಅದೆಲ್ಲ ಮಾಡಿ ಮರಳಿ ಬಂದವ, ಕಟ್ಟಡದ ಬಗ್ಗೆ ಹೇಳತೊಡಗಿದ. ಮಳೆ, ಗಾಳಿ ಮುಂತಾದ ಪ್ರಾಕೃತಿಕ ಶಕ್ತಿಗಳಿಂದಾಗಿ ಮತ್ತು ಕಾಲಕ್ಕೆ ಸಹಜವಾಗಿ ದುರ್ಬಲವಾಗಿದೆ. ಇದು ವಾಸಕ್ಕೆ ಅಪಾಯಕಾರಿ. ಬೇರೆ ಕಟ್ಟಡ ನಿರ್ಮಿಸಿಕೊಳ್ಳುವುದು ಉತ್ತಮ ಅಂತ ಹೇಳಿ, ತಾನು ಬೇಕಿದ್ರೆ ಇಲಾಖೆಯ ಕಡೆಯಿಂದ ಬೇಕಾದ ಸಹಾಯ ಕೊಡಿಸ್ತೇನೆ ಅಂತಲು ಹೇಳಿ ಹೊರಟುಹೋದ. ಇದು ತಮ್ಮ ಸ್ವಂತ ಕಟ್ಟಡ. ಸರಕಾರದ್ದಾಗಲಿ, ಹತ್ತುಜನ ಸೇರುವ ವ್ಯವಹಾರಕ್ಕಾಗಲಿ ಬಳಸುವುದಲ್ಲ. ಮತ್ತೆ ಇಲಾಖೆ ಯಾವಾಗಿಂದ ಇಂತಹ ಜವಾಬ್ದಾರಿ ವಹಿಸಲು ತೊಡಗಿತು? ಹಾಗೇನಾದರು ಹೊಸ ಕಾನೂನು ಬಂದಿದೆಯೇ ಅಂತ ಸಂದೇಹ ಬಂದು ಲೋಕೋಪಯೋಗಿ ಇಲಾಖೆಯ ಮುಖ್ಯಸ್ಥರ ಹತ್ತಿರ ಫೋನಲ್ಲಿ ಸಂಗತಿ ತಿಳಿಸಿ ವಿಚಾರಿಸಿದರು. ಅವರು ವಿಚಾರಣೆ ನಡೆಸಿ ತಮ್ಮಲ್ಲಿ ಆ ಎಂಜಿನಿಯರು ಕೆಲಸದಲ್ಲಿರುವುದು ನಿಜ ಆದರೆ, ಇಲಾಖೆ ಅವರನ್ನು ಕಳಿಸಿಲ್ಲ ಅಂತ ವಿವರಣೆ ನೀಡಿದರು. ಆಮೇಲೆ ಆ ಎಂಜಿನಿಯರು, ತಾನು ಇಲಾಖೆಯ ವತಿಯಿಂದ ಪರೀಕ್ಷೆ ನಡೆಸಿದ್ದಲ್ಲ, ಕೇವಲ ಸಾರ್ವಜನಿಕ ಕಾಳಜಿಯಿಂದ ವೈಯಕ್ತಿಕವಾಗಿ ಮಾಡಿದ್ದು, ಇಲಾಖೆಗೂ ಅದಕ್ಕೂ ಯಾವ ಸಂಬಂಧವಿಲ್ಲ, ಆದರೆ ಕಟ್ಟಡದ ಬಗ್ಗೆ ತಾನು ಕೊಟ್ಟ ಅಭಿಪ್ರಾಯ ಖಂಡಿತ ಸತ್ಯವಾದ್ದು ಅಂತ ಹೇಳಿದ.

15

ಬೆಳಗಿನ ತಿಂಡಿ ಮುಗಿಸಿ ಆನಂದ ದೇಶ್ವಂತರೊಂದಿಗೆ ಆವತ್ತಿನ ಕೆಲಸದ ವಿಷಯ ಮಾತಾಡುತ್ತಿದ್ದ. ಗೇಟು ತೆರೆದುಕೊಂಡು ಐದಾರು ಜನ ಒಳಗೆ ಬಂದರು. ಅವರಲ್ಲಿ ಇಬ್ಬರು ಮಹಿಳೆಯರಿದ್ದರು. ನೀಳ ಕಾಯದ, ಗಡ್ಡ ಸಣ್ಣಕೆ ಟ್ರಿಮ್ ಮಾಡಿದ ಒಬ್ಬಾತ, ತನ್ನನ್ನು ಶಾಮಸುಂದರ ಗ್ರಾಹಿ ಅಂತ ಪರಿಚಯಿಸಿಕೊಂಡು ವಿಸಿಟಿಂಗ್ ಕಾರ್ಡು ಕೊಟ್ಟ. ಆನಂದ ಇದರ ಬಗ್ಗೆ ಮೊದಲೂ ಓದಿದ್ದ.



**ಮೇಘರಾಗ**

ಮೇಘನಬ್ಬರಕೆ
ಆಗಾಗ ಭಾನುಬಾನು
ಸಹಿಸದೆ ಜೊತೆಯಲಿ
ಹಾಡಲು ಮುಂದಾಗೆ
ಹುಟ್ಟಿದ್ದು ಮೇಘರಾಗ;
ಪ್ರಕೃತಿ ನಲಿದು ಕಪ್ಪಳಿಸಿ
ಸಂತಸದ ಬೆವರ ಹನಿಸಿದಳು
ಭುವನ ಸುಂದರಿ ತಂಪಾಗಿ
ತೇಲಾಡಿದಳು...!

–ವಿ. ಸುಬ್ರಹ್ಮಣ್ಯ ಭಟ್

'ಕನ್ಸರ್ವೇಶನ್ ಆಫ್ ಹ್ಯೂಮನ್ ಹೆರಿಟೇಜ್ ಅಂಡ್ ನೇಚರ್' ಒಂದು ಎನ್‌ಜಿಒ. 'ಮಾನವ ಪರಂಪರೆ ಮತ್ತು ಪ್ರಕೃತಿ ರಕ್ಷಣೆ' ಅಂತ ಕನ್ನಡದಲ್ಲಿ ಅನುವಾದವಿತ್ತು. ಶಾಮಸುಂದರ ಗ್ರಾಹಿ ಭೂಗೋಲ ಶಾಸ್ತ್ರದಲ್ಲಿ ಎಂ.ಎ ಮಾಡಿ ಎರಡು ವರ್ಷ ದಿಲ್ಲಿಯಲ್ಲಿ ಯಾವುದೋ ಕೆಲಸದಲ್ಲಿದ್ದ. ಆಮೇಲೆ ಅದನ್ನು ಬಿಟ್ಟು, ಈ ಸಂಘಟನೆಯನ್ನು ಹುಟ್ಟುಹಾಕಿದ. ಸಂಘಟನೆಯಲ್ಲಿ ಎಲ್ಲ ವಯೋಮಾನದ ಪುರುಷರು ಮತ್ತು ಮಹಿಳೆಯರಿದ್ದರು. ಸಂಘಟನೆ ವಿಸ್ತರಿಸುತ್ತ ಸುಮಾರು ಎಲ್ಲಾ ರಾಜ್ಯಗಳಲ್ಲಿ ಶಾಖೆ ಹೊಂದಿತ್ತು. ದೇಶವಿದೇಶಗಳಿಂದ ಅದಕ್ಕೆ ಅನುದಾನ ಹರಿದು ಬರುತ್ತದೆ ಅಂತ ಸುದ್ದಿಯಿತ್ತು.

ಅವರನ್ನು ಪಡಸಾಲೆಗೆ ಕರೆದೊಯ್ದ ಆನಂದ. ಶಾಮಸುಂದರ ಉಳಿದವರನ್ನೂ ಪರಿಚಯಿಸಿದ. ಆಮೇಲೆ ವಿಷಯಕ್ಕೆ ಬಂದ. ಕುರ್ಚಿಯಲ್ಲಿ ಮುಂದಕ್ಕೆ ಬಾಗಿ 'ಕಟ್ಟಡಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ ಅಂತ ಪತ್ರಿಕೆಗಳು ವರದಿ ಮಾಡತಿವೆ, ಅದು ನಿಜವೆ?' ಪ್ರಶ್ನಿಸಿದ. 'ಅದು ನಿಜ' ಉತ್ತರಿಸಿದ ಆನಂದ. 'ಇದನ್ನೀಗ ನೀವು ಕೆಡವಲು ಉದ್ದೇಶಿಸಿದ್ದೀರಿ ಅಂತ ಕೇಳಿದೆ...' ಸ್ವರದಲ್ಲಿ ಆರೋಪವಿತ್ತು. ಆನಂದ ತಾಳ್ಮೆ ಕಳೆದುಕೊಂಡ. 'ನಿಮಗಿದನ್ನು ಹೇಳಿದವರು ಯಾರು, ಮೊದಲು ಹೇಳಿ' ಅಂದ. ಮೊಮ್ಮಗನಿಗೆ ಸನ್ನೆಮಾಡಿದ ದೇಶ್ವಂತರು, ಶಾಮಸುಂದರನತ್ತ ತಿರುಗಿ 'ನಾವ್ಯಾವತ್ತು ಆ ವಿಚಾರ ಮಾತಾಡಿಲ್ಲ. ಆದ್ರೆ ಹೊರಗಿಂದ ಇಂತಾ ವದಂತಿ ಹೇಗೆ ಬರತಾ ಇದೆಯೊ ಗೊತ್ತಿಲ್ಲ. ನಿಮಗಿದು ಎಲ್ಲಿಂದ ಗೊತ್ತಾಯ್ತು ಅಂತ ಹೇಳಿದ್ರೆ ನಮಗೂ ಅನುಕೂಲ' ಅಂದರು ಸಮಾಧಾನದಿಂದ.

'ನೋಡಿ ದೇಶ್ವಂತರವರೆ, ನಮ್ಮ ಹಕ್ಕಿನದೇ ಆಗಿದ್ದೂ ಕೆಲವು ವಸ್ತುಗಳು ಶತಶತಮಾನಗಳಲ್ಲಿ, ಈ ಪ್ರಕೃತಿಯ ಸತ್ವವನ್ನು ಉಣ್ಣುತ್ತ, ಸುತ್ತಲಿನ ಜನಾಂಗದ ಆದರದಲ್ಲಿ ರಕ್ಷಣೆ ಪಡೀತಾ ಸಮಾಜಕ್ಕೆ ಋಣಿಯಾಗಿಬಿಡತವೆ. ನೈತಿಕ ನ್ಯಾಯದಲ್ಲಿ ಅದು ಒಬ್ಬರ ಸ್ವತ್ತಾಗಿ ಉಳಿಯೋದಿಲ್ಲ. ಉದಾಹರಣೆಗೆ ತಾಜಮಹಲು, ಚಿತ್ರದುರ್ಗದ ಕೋಟೆ ಇತ್ಯಾದಿ. ಅದನ್ನು ಕಟ್ಟಿದ್ದು ನಮ್ಮ ವಂಶಸ್ಥರು, ನಾವೇನು ಬೇಕಿದ್ರು ಮಾಡಕೋತೀವಿ ಅಂತ ಯಾರೋ ಬರಬಹುದೆ? ಹಾಗೇ ಈ ಭವನ ನೀವು ವಾಸಿಸೋದಾಗಿದ್ದು, ಕಾನೂನು ಪ್ರಕಾರ ನಿಮ್ಮ ಹಕ್ಕಿಂದೇ ಆಗಿದ್ರು, ಇದೀಗ ಇತಿಹಾಸವನ್ನರಗಿಸಿಕೊಂಡಿದೆ. ದೇಶದ ಮೊದಲ ಕನ್ನಡ ಸಾಮ್ರಾಜ್ಯದ ಪುರಾವೆಯಾಗಿದೆ. ಆ ಪ್ರಭಾವಳಿ ಜನತೆ ಕಟ್ಟಿದ್ದಲ್ಲವೇ? ಭವನ ನಿಮ್ಮದು, ಕೆಡವಿ. ಆದರೆ ಜನಾಂಗಕ್ಕೆ ಸೇರಿದ ಪ್ರಭಾವಳಿಯನ್ನು ಕೆಡವೋ ಹಕ್ಕು ನಿಮಗಿಲ್ಲ ಅಲ್ಲವೇ?' ಕೇಳಿದ. ತರ್ಕದ ಜಾಲದಲ್ಲಿ ಗೊಂದಲ ಹುಟ್ಟಿಸುವ ಇವನ ಉದ್ದೇಶವೇನು ತಿಳಿಯದೆ ಕೆರಳಿದ ಆನಂದ 'ನೋಡಿ, ಇದು ನಾವು ತೆರಿಗೆ ಕಟ್ಟತಾ ಬಂದ, ನಮ್ಮ ಹೆಸರಲ್ಲಿ ನಿಸ್ಸಂದೇಹ ಹಕ್ಕಿರುವ ಜಾಗ. ಈ ಪ್ರಭಾವಳಿ ನೈತಿಕ ಋಣ ಎಲ್ಲ ಯಾವ ಕಾಯದೆ ವ್ಯಾಪ್ತಿಗೂ ಬರೋದಿಲ್ಲ' ಅಂದ. ಶಾಮಸುಂದರ ಗಂಭೀರನಾಗಿ 'ನೋಡಿದ್ರಾ? ನೀವು